155-72-8

8

29

06/03/2025

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ. ಧನಂಜಯ ಸರ್ಜಿ ರವರ ನಿಯಮ 72 ರಡಿಯ ಗಮನ ಸೆಳೆಯುವ ಸೂಚನೆಗೆ ಉತ್ತರ

ಗಮನ ಸೆಳೆಯುವ ಸೂಚನೆ:

ಹಲವಾರು ಶೈಕ್ಷಣಿಕ ವರದಿಗಳ ಪ್ರಕಾರ ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಆತಂಕಕಾರಿಯಾಗಿರುವ ವಿಷಯದ ಕುರಿತು ಸರ್ಕಾರದ ನೀತಿ ಹಾಗೂ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:

ASER (Annual Status Of Education Report) ಸಮೀಕ್ಷೆಯು ಮಕ್ಕಳ ದಾಖಲಾತಿ ಸ್ಥಿತಿ ಮತ್ತು ಅವರ ಮೂಲಭೂತ ಓದುವಿಕೆ ಮತ್ತು ಅಂಕಗಣಿತದ ಕೌಶಲ್ಯಗಳ ಕುರಿತು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಅಂದಾಜುಗಳನ್ನು ರಚಿಸಿದೆ. 3-16 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗಾಗಿ ಶಾಲೆ ಅಥವಾ ಪೂರ್ವ ಪ್ರಾಥಮಿಕ ಶಾಲೆ (Pre School) ಗಳಿಗೆ ದಾಖಲಾತಿ ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದೆ ಹಾಗೂ 5-16 ವರ್ಷ ವಯಸ್ಸಿನ ಮಕ್ಕಳನ್ನು ಅವರ ಓದುವಿಕೆ ಮತ್ತು ಅಂಕಗಣಿತದ ಮಟ್ಟವನ್ನು ಅರ್ಥ ಮಾಡಿಕೊಳ್ಳಲು ಪರೀಕ್ಷಿಸಲಾಗಿರುತ್ತದೆ. ಮುಂದುವರೆದು, 14-16 ವರ್ಷ ವಯಸ್ಸಿನ ಹಿರಿಯ ಮಕ್ಕಳ ಡಿಜಿಟಲ್ ಸಾಮರ್ಥ್ಯಗಳನ್ನು ಅಳೆಯಲು ಸ್ಮಾರ್ಟ್ ಫೋನ್ ಆಧಾರಿತ ಕಾರ್ಯಗಳ ಗುಂಪನ್ನು ರಚಿಸಿ, ಪರೀಕ್ಷಿಸಲಾಗಿದ್ದು, 2024ನೇ ಸಾಲಿನಲ್ಲಿ ಸಮೀಕ್ಷೆ ನಡೆಸಿ 2025ನೇ ಸಾಲಿನ ಜನವರಿ ಮಾಹೆಯಲ್ಲಿ ಡ್ರಾಫ್ಟ್ ವರದಿಯನ್ನು ಬಿಡುಗಡೆ ಮಾಡಿದೆ.

ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಕಲಿಕೆಯನ್ನು ಉತ್ತಮಪಡಿಸಲು ಇಲಾಖೆಯಿಂದ ಕೈಗೊಂಡಿರುವ ಮತ್ತು ಮುಂದಿನ ದಿನಗಳಲ್ಲಿ ಕೈಗೊಳ್ಳುವ ಕ್ರಮಗಳು ಈ ಕೆಳಗಿನಂತಿವೆ:

1. ವಿದ್ಯಾರ್ಥಿಗಳಲ್ಲಿ ಭಾಷೆ ಮತ್ತು ಗಣಿತದ ಮೂಲಭೂತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು Fundamental Literacy & Numeracy (FLN) ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

2. 4 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಿಗೆ ಬುನಾದಿ ಭಾಷಾ ಮತ್ತು ಗಣಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು "ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಬೋಧನೆ" ಎಂಬ ಬೋಧನಾ ವಿಧಾನವನ್ನು ಬಳಸಿಕೊಂಡು ಸರಳ ಮೌಲ್ಯಮಾಪನದ ಮೂಲಕ ಮಕ್ಕಳ ಕಲಿಕಾ ಮಟ್ಟ ಗುರುತಿಸಿಕೊಂಡು ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಮಕ್ಕಳ ಗುಂಪುಗಳನ್ನು ಮಾಡಿ ಸೂಕ್ತ ಕಲಿಕಾ ಸಾಮಗ್ರಿಗಳನ್ನು ನೀಡಿ ಚಟುವಟಿಕೆಗಳನ್ನು ನಡೆಸಿ ಕಲಿಸಲು ಕ್ರಮ ಕೈಗೊಳ್ಳಲಾಗುವುದು.

3. ನಿಪುಣ್ ಭಾರತ್ ಅಡಿಯಲ್ಲಿ ಮಾರ್ಪಾಡು ಮಾಡಿರುವ FLNನ 17 ಕಲಿಕಾಫಲಗಳ ಬಗ್ಗೆ ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಿ ಜಿಲ್ಲಾ ಅನುಷ್ಠಾನ ಅಧಿಕಾರಿಗಳ ಮೂಲಕ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ FLN ಕಲಿಕಾಫಲಗಳನ್ನು ಅನುಷ್ಠಾನ ಮಾಡುವುದು ಹಾಗೂ ಅನುಪಾಲನೆ ಮಾಡುವುದು.

4. ಜುಲೈ 2025 ರ ಮಾಹೆಯಿಂದ ಸರ್ಕಾರಿ ಶಾಲೆಗಳ 4 ಮತ್ತು 5 ನೇ ತರಗತಿಯ ಶಿಕ್ಷಕರಿಗೆ ತರಬೇತಿಯನ್ನು ನೀಡಿ ಶಾಲಾ ವೇಳೆಯಲ್ಲಿ ಪೂರಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ಕಲಿಕೆ ಮಟ್ಟವನ್ನು (ಅಕ್ಷರ, ಪದ, ವಾಕ್ಯಗಳನ್ನು ನಿರರ್ಗಳವಾಗಿ ಓದುವ) ಉತ್ತಮಗೊಳಿಸಲು ಕ್ರಮ ವಹಿಸಲಾಗುವುದು.

5. ಮಕ್ಕಳ ಪ್ರಗತಿ ಸಾಧನೆಯನ್ನು ಪ್ರತಿ ತಿಂಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (ಡಯಟ್) ಮೂಲಕ ಪಡೆದು ಪರಿಶೀಲಿಸಿ ಮುಂದಿನ ತಿಂಗಳಲ್ಲಿ FLN ಸಾಧಿಸದ ಮಕ್ಕಳಿಗೆ ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಡಯಟ್‌ನ ನೋಡಲ್ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು.

6. FLN ಸಾಧನೆ ಮಾಡಿದ ಶಾಲೆಗಳು, ಕ್ಲಸ್ಟರ್ ಗಳು ಮತ್ತು ಬ್ಲಾಕ್ ಗಳನ್ನು ಗುರುತಿಸಿ ಉತ್ತೇಜಿಸುವುದು.

7. ಕಲಿಕಾ ಹಬ್ಬ, ಮೆಟ್ರಿಕ್ ಮೇಳ, FLN ಪೂರ್ಣಪ್ರಮಾಣದಲ್ಲಿ ಜಾರಿಗೆ ತರುವುದು ಸ್ಪರ್ಧೆಗಳನ್ನು ಏರ್ಪಡಿಸುವುದು, ವಿದ್ಯಾ ಪ್ರವೇಶವನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಮಾಸಾಚರಣೆಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಈ ಎಲ್ಲಾ ಅಂಶಗಳ ಕುರಿತು 2025-26 ರ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು, ನಿಯಮಿತ ಅನುಪಾಲನೆಗೆ ಕ್ರಮ ವಹಿಸುವುದು.

8. ಓದು ಕರ್ನಾಟಕ ಕಾರ್ಯಕ್ರಮದಡಿ ರಾಜ್ಯದ 42 ಸಾವಿರ ಶಿಕ್ಷಕರಿಗೆ ತರಬೇತಿ ನೀಡಿ ಪ್ರತಿ ದಿನ ಭಾಷಾ ಮತ್ತು ಗಣಿತ ಕಲಿಕೆಗೆ ತಲಾ 1 ಅವಧಿಯನ್ನು ನಿಗದಿಪಡಿಸಿ 60 ದಿನಗಳ ಕಾಲ ಶಾಲಾ ವೇಳೆಯಲ್ಲಿ ಅನುಷ್ಠಾನಗೊಳಿಸಲಾಗುವುದು.

9. ಕಾರ್ಯಕ್ರಮದ ಪ್ರಾರಂಭದಲ್ಲಿ Base line ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಗುರುತಿಸಿಕೊಂಡು 60 ದಿನಗಳ ನಂತರ Endline ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಪ್ರಗತಿಯನ್ನು ತಂತ್ರಜ್ಞಾನವನ್ನು ಬಳಸಿ ವಿಶ್ಲೇಷಿಸಲಾಗುವುದು.

10. ಗಣಿತ ಗಣಕ :- ಈ ವಿನೂತನ ಕಾರ್ಯಕ್ರಮವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿಯೂ ಮುಂದುವರೆಸಲು ಉದ್ದೇಶಿಸಲಾಗಿದೆ.

11. 2025-26 ನೇ ಸಾಲಿಗೆ PAB ಚಟುವಟಿಕೆಗಳಡಿ 6 ರಿಂದ 8 ನೇ ತರಗತಿ ಬೋಧಿಸುವ ಶಿಕ್ಷಕರಿಗೆ ತರಬೇತಿ ನೀಡಲಾಗುವುದು.

12. 2025-26ನೇ ಸಾಲಿನಲ್ಲಿ ಗಣಿತ ಕಲಿಕಾ ಆಂದೋಲನಾ ಕಿಟ್-2.0 ಬಳಕೆಯನ್ನು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಅನುಪಾಲನಾ ಅಧಿಕಾರಿಗಳಿಂದ ಅನುಪಾಲನೆ ಮಾಡಲಾಗುವುದು.

13. 2024-25ನೇ ಸಾಲಿನಲ್ಲಿ 6ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ತರಗತಿಗಳು ನಡೆಯುತ್ತಿರುವ 1001 ಶಾಲೆಗಳಲ್ಲಿ 2025-26ನೇ ಸಾಲಿನಲ್ಲಿ 7ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ಪ್ರಾರಂಭಿಸಲಾಗುವುದು.

14. ಆಲೂರು ವೆಂಕಟ ರಾವ್ ಭಾಷಾ ಕೌಶಲ್ಯ ಕೇಂದ್ರಗಳ ಮೂಲಕ ಕಥೆಗಳ ಮೂಲಕ ಭಾಷಾ ಬೆಳವಣಿಗೆ (Story based pedagogy) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

15. ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಮೂಲಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಉಳಿಯುವಿಕೆಯನ್ನು ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡುವುದು ಹಾಗೂ ಶಾಲೆಯಿಂದ ಹೊರಗುಳಿಯುವ ಮತ್ತು ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವುದು.

16. ಮಕ್ಕಳ ಕಲಿಕೆಯ ಗುಣ ಮಟ್ಟವನ್ನು ಹೆಚ್ಚಿಸಲು ಈ ಕೆಳಕಂಡ 10 ಅಂಶದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ:

    i. ಚಟುವಟಿಕೆ (೧) - ಸೇತುಬಂಧ.
    ii. ಚಟುವಟಿಕೆ (೨) - ಶಾಲಾ ಶೈಕ್ಷಣಿಕ ಯೋಜನೆ.
    iii. ಚಟುವಟಿಕೆ (೩) - ಭಾಷಾ ಮಾಸಾಚರಣೆ.
    iv. ಚಟುವಟಿಕೆ (೪) - ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ.
    v. ಚಟುವಟಿಕೆ (೫) – ವಿಷಯ ವೇದಿಕೆ
    vi. ಚಟುವಟಿಕೆ (೬) - ವಾರದ ವಿಜ್ಞಾನ ಪ್ರಯೋಗ.
    vii. ಚಟುವಟಿಕೆ (೭)-ವಿಶೇಷ ಅವಧಿ ಹಾಗೂ ಸತತ ಪರಿಶ್ರಮ.
    viii. ಚಟುವಟಿಕ (೮) - ಸಹೋದ್ಯೋಗಿಗಳ ಅವಲೋಕನ ಪಾಠ.
    ix. ಚಟುವಟಿಕೆ (೯) ಪುಸ್ತಕದ ಪರಿಚಯ
    x. ಚಟುವಟಿಕೆ (೧೦) ರಸ ಪ್ರಶ್ನೆ ಕಾರ್ಯಕ್ರಮ

17. 1ನೇ ತರಗತಿಗೆ ಹೊಸದಾಗಿ ದಾಖಲಾಗುವ ಮಕ್ಕಳಿಗೆ ಅನುಕೂಲವಾಗುವಂತೆ ವಿದ್ಯಾಪ್ರವೇಶ ಚಟುವಟಿಕೆಗಳ ಹಾಳೆಗಳನ್ನು ಕಲಿ-ನಲಿ ಪಠ್ಯ ಪುಸ್ತಕದಲ್ಲಿ (ಆಂಗ್ಲ ಮರಾಠಿ, ತಮಿಳು, ತೆಲುಗು, ಮಾಧ್ಯಮ) ಅಳವಡಿಸಲು ಕ್ರಮ ವಹಿಸಲಾಗುತ್ತಿದೆ.

18. ಸೇತುಬಂಧ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಮಾರ್ಗದರ್ಶನ ನೀಡಲಾಗುವುದು.

19. ಕಲಿಕಾ ಚೇತರಿಕೆ, ಕಲಿಕಾ ಬಲವರ್ಧನ ಉಪಕ್ರಮಗಳಡಿಯಲ್ಲಿ ಸಿದ್ಧಪಡಿಸಿರುವ ಚಟುವಟಿಕೆ ಪುಸ್ತಕಗಳು, ಕಲಿಕಾ ಫಲಾಧಾರಿತ ಪ್ರಶ್ನೆ ಕೋಠಿ, ಅಭ್ಯಾಸ ಪುಸ್ತಕಗಳ ನಿರಂತರ ಬಳಕೆಗೆ ಪೂರಕವಾಗಿದ್ದು, ಇವುಗಳ ಬಳಕೆಯ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು.

20. 2025-26 ನೇ ಸಾಲಿನಿಂದ TALP ಸೌಲಭ್ಯ ಹೊಂದಿರುವ 2000 ಶಾಲೆಗಳಲ್ಲಿ 4ನೇ ತರಗತಿಯಿಂದ 10ನೇ ತರಗತಿಗಳ ಅಂದಾಜು 2 ಲಕ್ಷ ವಿದ್ಯಾರ್ಥಿಗಳಿಗೆ "ಕಲಿಕಾ ದೀಪ" ಹಮ್ಮಿಕೊಳ್ಳಲಾಗುವುದು.

21. ಖಾನ್ ಅಕಾಡೆಮಿ ಸಹಯೋಗದೊಂದಿಗೆ ರಾಜ್ಯದ 6 ರಿಂದ 10ನೇ ತರಗತಿಯ ಸರ್ಕಾರಿ ಶಾಲೆಗಳಲ್ಲಿ "ಜ್ಞಾನ ಸೇತು" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

22. ರಾಜ್ಯದ 6 ರಿಂದ 10 ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ನಾವೀನ್ಯತೆ ಅಳವಡಿಸಿಕೊಳ್ಳಲು, ಕೃತಕ ಬುದ್ಧಿಮತ್ತೆ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

23. ಕಂಪ್ಯೂಟರ್ ಸೌಲಭ್ಯವನ್ನು ಹೊಂದಿರುವ ರಾಜ್ಯದ 5000 ಸರ್ಕಾರಿ ಶಾಲೆಗಳಲ್ಲಿ 6 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನದ ಬಳಕೆಯಿಂದ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಯಲು ಅವಕಾಶ ಕಲ್ಪಿಸಲಾಗುವುದು.

ಸಂಖ್ಯೆ: ಇಪಿ 20 ಪಿಎಂಎ 2025

(ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು